**ದಿನಾಂಕಃ 04.12.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ಪ್ರತಿವಾದಿ 1 ಮತ್ತು ವಾದಿಯ ಮಧ್ಯೆ ದಿನಾಂಕಃ 16.06.2014 ರಂದು ಆಗಿರುವ ಕ್ರಯದ ಕರಾರು ಪತ್ರದ ಮೂಲ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–1 ಎಂದು ಗುರುತಿಸಲಾಯಿತು. ನಿಪಿ–1ಕ್ಕೆ ಎಲ್. ರವಿ ಮತ್ತು ಡಿ.ಕೆ. ಸುಜಾತರವಿ ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯಾಗಿ ಅಬ್ದುಲ್ ಕಲೀಲ್ ಮತ್ತು ಹೆಚ್ ಎನ್. ಗೀತಾರವರು ಸಹಿ ಮಾಡಿರುತ್ತಾರೆ. ಮಾದಪ್ಪ ವಕೀಲರು ನಿಪಿ–1ನ್ನು ಮಾಡಿರುತ್ತಾರೆ. ನಿಪಿ–1ಕ್ಕೆ 1ನೇ ಪ್ರತಿವಾದಿ ಕೂಡ ಸಹಿ ಮಾಡಿರುತ್ತಾರೆ. ದಿನಾಂಕಃ 17.09.2014 ರಂದು ನೀಡಿದ ಹಿಂಬರಹವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–2 ಎಂದು ಗುರುತಿಸಲಾಯಿತು. ನಿಪಿ–2ನ್ನು 1ನೇ ಪ್ರತಿವಾದಿಯು ಹಣವನ್ನು ಪಡೆದು ನಿಪಿ–2 ರಂತೆ ಹಿಂಬರಹ ನೀಡಿರುತ್ತಾರೆ. ನಿಪಿ–2ಕ್ಕೆ ಗೀತಾರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಮೂರು ಪಹಣಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ–3 ರಿಂದ ನಿಪಿ–5 ಎಂದು ಗುರುತಿಸಲಾಯಿತು. ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–6 ಎಂದು ಗುರುತಿಸಲಾಯಿತು. ಎರಡು ಅಂಚೆ ಸ್ವೀಕೃತಿಗಳನ್ನು ನಿಪಿ–7 ಮತ್ತು ನಿಪಿ–8 ಎಂದು ಗುರುತಿಸಲಾಯಿತು. 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ದಿನಾಂಕಃ 26.08.2017 ರಂದು ಬರೆದುಕೊಟ್ಟ ದಾನ ಪತ್ರದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–9 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.